ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಸಂಖ್ಯೆ:-ಸ.ಕಾ.ಅ(ವಿ)/ಹಿ.ಸ/ಮೊ/2019-20/ 13

ಸಹಾಯಕಕಾರ್ಯ ನಿರ್ವಾಹಕಅಭಿಯಂತರರು (ವಿ)
ಕಾರ್ಯ ಮತ್ತು ಪಾಲಾನ ಉಪ ವಿಭಾಗ
ಬೆ.ವಿ.ಕಂ. ಮೊಳಕಾಲ್ಮೂರು
ದಿನಾಂಕ: 04-4-2019

ವಲಯಅರಣ್ಯಾಧಿಕಾರಿಯವರು
ಮೊಳಕಾಲ್ಮೂರು ವಲಯ,
ಮೊಳಕಾಲ್ಮೂರು

ಮಾನ್ಯರೇ,

**ವಿಷಯ:–Arranging 24Hours power supply to non-agricultural load of JB Halli feeder insantheguddapanchayathlimits under nirantarajyothi scheme.Proposal No.FP/KA/VELEC/19005/2016.**

ಉಲ್ಲೇಖ:-ತಮ್ಮಕಛೇರಿ ಪತ್ರ ಸಂಖ್ಯೆ: ವಅಅ/ಮೊ/ವಿದ್ಯುತ್/ಪ್ರ/ಕಾ/2018-19/144 ದಿನಾಂಕ:22-02-2019.

ಮೇಲ್ಕಂಡ ವಿಷಯಕ್ಕೆ ಹಾಗು ಉಲ್ಲೇಖಕ್ಕೆ ಸಂಬಂದಿಸಿದಂತೆ, ಮೊಳಕಾಲ್ಮೂರು ತಾಲ್ಲೂಕು ದೇವಸಮುದ್ರ ಹೋಬಳಿ ಸಂತೆಗುಡ್ಡ ಪಂಚಾಯಿತಿ ವ್ಯಾಪ್ತಿಗೆ ಸೇರಿದ 6 ಹಳ್ಳಿಗಳಿಗಾಗಿ ಹೊಸದಾಗಿ ನಿರ್ಮಿಸುತ್ತಿರುವ 11ಕೆ.ವಿ ಎನ್.ಜೆ.ವೈ ವಿದ್ಯುತ್ ಮಾರ್ಗಕ್ಕೆ ತಮ್ಮ ಇಲಾಖೆಗೆ ಅಂತರ್ಜಾಲದ ಮೂಲಕ ಅನುಮತಿಗಾಗಿ ಪ್ರಸ್ಥಾವನೆಯನ್ನು ಸಲ್ಲಿಸಿದ್ದು. ಸದರಿ ವಿಷಯವಾಗಿ ತವುಗಳು ಸ್ಥಳ ಪರಿಶೀಲಿಸಿ ಈ ಕೆಳಕಂಡ ನ್ಯೂನತೆಗಳನ್ನು ಪಟ್ಟಿ ಮಾಡಿ ಉಲ್ಲೇಖಿತ ಪತ್ರವನ್ನು ಈ ಕಛೇರಿಗೆ ರವಾನಿಸಿರುತ್ತಿರಿ ಸದರಿ ಪತ್ರದಲ್ಲಿ ಸೂಚಿಸಿರುವ ನ್ಯೂನತೆಗಳನ್ನು ಸರಿ ಪಡಿಸಿ ಸರ್ವೇ ನಂಬರ್ ವಾರು 11ಕೆ.ವಿ ಮಾರ್ಗದ ಕಂಬಗಳ ಗುರುತುಗನ್ನು ಮಾಡಿ ಕಂಬದ ಗುರುತಿನಿಂದ 3.5ಮೀ ಎಡಕ್ಕೆ ಹಾಗು 3.5ಮೀ ಬಲಕ್ಕೆ ಗಡಿಯನ್ನು ಗುರುತು ಮಾಡಿ ತಮ್ಮಇಲಾಖೆಯ ಗಾರ್ಡ್‌ಗಳ ಸಹಾಯ ಹಾಗು ಮಾರ್ಗದರ್ಶನದಿಂದ 7ಮೀ ಗಡಿಯಲ್ಲಿ ಬರುವ ಕಾಂಡದ ಸುತ್ತಳತೆ 30ಸೆ.ಮೀ ಇರುವ ಮರಗಳಿಗೆ ನಂಬರಿಂಗ್ ಮಾಡಲಾಗಿದೆ. ಅದ್ದರಿಂದ ತಾವುಗಳ ಮುಂದಿನ ನಿಯಮಗಳನ್ನು ಪೂರ್ಣಗೊಳಿಸಿ ತಮ್ಮ ಇಲಾಖೆಯಿಂದ ಅನುಮತಿ ನೀಡಲು ಅನುವು ಮಾಡಿಕೊಡಬೇಕೆಂದು ಕೊರಲಾಗಿದೆ.

ಸಹಾಯಕಕಾರ್ಯ ನಿರ್ವಾಹಕಅಭಿಯಂತರರು (ವಿ)
ಕಾರ್ಯ ಮತ್ತು ಪಾಲಾನ ಉಪ ವಿಭಾಗ
ಬೆ.ವಿ.ಕಂ. ಮೊಳಕಾಲ್ಮೂರು

ಸಂಖ್ಯೆ:ವಿಸಿ/ಮೊವ/ವಿ.ಲೈ/ಸಿಆರ್-17/2016-17

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ,
ದಿನಾಂಕ: 16.11.2016.

ಇವರಿಗೆ,

ಕಾರ್ಯನಿರ್ವಾಹಕ ಇಂಜಿನಿಯರ್,
(ಎಲೆಕ್ಟ್ರಿಕಲ್) ಸಿ. ಓ & ಎಂ. ಬೆಸ್ಕಾಂ,
ಹಿರಿಯೂರು (ತಾ), ಚಿತ್ರದುರ್ಗ ಜಿಲ್ಲೆ.

ಮಾನ್ಯರೇ,

ವಿಷಯ: Forest Approval for Construction of 11 KV Electrical Line for Arranging Continious Power Supply to non Agricultural load of J.B Hally Feeder from Rampura MUSS to Hanumapura Village Limits under Niranthara Jyothi Yojna Scheme Phase-2 in Molakalmuru Sub Division, for crossing the forest Limit a) Bandravi Village Sy No. 96, 97, 98, 103, 104 & 113-1.155 Ha. B) Santhegudda Village Sy No. 94, 154, 156, 160, 162, 164 & 165 – 2.205 Ha C) Bandravi Village Sy No. 8 & 45 – 0.78 ha total 4.14 ha.

ಉಲ್ಲೇಖ:
1. ನೋಡಲ್ ಆಫೀಸರ್, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಅರಣ್ಯ ಭವನ, ಬೆಂಗಳೂರು ಇವರ ಇ-ಮೇಲ್ ದಿನಾಂಕ: 27.06.2016.
2. ಎಕ್ಸಿಕ್ಯೂಟಿವ್ ಇಂಜಿನಿಯರ್, (ಎಲೆಕ್ಟ್ರಿಕಲ್) ಸಿ. ಓ & ಎಂ, ಬೆಸ್ಕಾಂ, ಹಿರಿಯೂರು ಇವರ ಕಛೇರಿ ಪತ್ರ ಸಂಖ್ಯೆ EEE/AEE(O)/AE(T)/2016-17/2504-10 ದಿನಾಂಕ: 01.07.2016.
3. ವಲಯ ಅರಣ್ಯಾಧಿಕಾರಿ, ಮೊಳಕಾಲ್ಮೂರು ವಲಯ, ಮೊಳಕಾಲ್ಮೂರು ರವರ ಕಛೇರಿ ಪತ್ರ ಸಂಖ್ಯೆ: ವಅಅ/ಮೊ/ವಿ.ಲೈ/ಸಿಆರ್ 2016-17 ದಿನಾಂಕ: 27.10.2016.
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿತ್ರದುರ್ಗ ಉಪ-ವಿಭಾಗ, ಚಿತ್ರದುರ್ಗ ರವರ ಕಛೇರಿ ಪತ್ರ ಸಂಖ್ಯೆ: ಸಅಸಂ/ಚಿಉವಿ/ಮೊವ/ವಿ.ಲೈ/2016-17/267 ದಿ: 08.11.2016.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರಲ್ಲಿ ನಿರಂತರ ಜ್ಯೋತಿ ವಿದ್ಯುತ್ ಯೋಜನೆ, ಯೋಜನೆ-2, ವಿದ್ಯುತ್ ಮಾರ್ಗವು ಮೊಳಕಾಲ್ಮೂರು ವಲಯದ ಬಾಂಡ್ರಾವಿ ಮತ್ತು ಸಂತೆಗುಡ್ಡ ವ್ಯಾಪ್ತಿಯ ಕೆಲ ಸರ್ವೆ ನಂಬರುಗಳ ಅರಣ್ಯ ಪ್ರದೇಶದಲ್ಲಿ ಹಾದು ಹೋಗುತ್ತಿರುವುದರಿಂದ ಅರಣ್ಯ ಸಂರಕ್ಷಣಾ ಕಾಯ್ದೆ 1980 ರನ್ವಯ ಪ್ರಸ್ತಾವನೆಯನ್ನು ಸಲ್ಲಿಸಿರುತ್ತೀರಿ.

ಈ ಸಂಬಂಧ ವಲಯ ಅರಣ್ಯಾಧಿಕಾರಿ, ಮೊಳಕಾಲ್ಮೂರು ವಲಯ, ಮೊಳಕಾಲ್ಮೂರು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚಿತ್ರದುರ್ಗ ಉಪ-ವಿಭಾಗ, ಚಿತ್ರದುರ್ಗ ರವರು ನೀವು ಸಲ್ಲಿಸಿರುವ ಪ್ರಸ್ತಾವನೆಯ ಪ್ರಕಾರ ಪರಿಶೀಲಿಸಲಾಗಿ, ಸರ್ವೆ ನಂಬರುವಾರು ವಿಸ್ತೀರ್ಣವನ್ನು ಟೋಪೋಶೀಟ್ ಹಾಗೂ ಗ್ರಾಮ ನಕಾಶೆಯಲ್ಲಿ ಗುರುತಿಸಿ ಮಾಹಿತಿಯನ್ನು ಸಲ್ಲಿಸದೇ ಇರುವುದರಿಂದ ಸ್ಥಳ ಪರಿಶೀಲನೆ ಮಾಡಲು ಸಾಧ್ಯವಾಗಿರುವುದಿಲ್ಲ ಹಾಗೂ ನೀವು ಸಲ್ಲಿಸಿದ ನಕಾಶೆಯಲ್ಲಿ ಗುರುತಿಸಿರುವಂತೆ ಐ-17, ಐ-18 ಹಾಗೂ ಐ-19 ಇವು ಈಗಾಗಲೇ ವಿದ್ಯುತ್ ಲೈನ್ ಹೋಗಿರುವ ಸ್ಥಳದಲ್ಲಿಯೇ ಬರುತ್ತಿರುವುದಾಗಿ ಉಲ್ಲೇಖ (3) ಮತ್ತು (4) ರಲ್ಲಿ ಈ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ.

ಆದ್ದರಿಂದ, ನಿರಂತರ ಜ್ಯೋತಿ ವಿದ್ಯುತ್ ಯೋಜನೆ ಮಾರ್ಗವು ಹಾದು ಹೋಗುವ ಪ್ರದೇಶಗಳ ವಿಸ್ತೀರ್ಣವನ್ನು ಸರ್ವೆ ನಂಬರುವಾರು ಒದಗಿಸಲು ಸೂಚಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.